ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ತಮ್ಮಲ್ಲಿ ವಿನಂತಿ ಮಾಡುವುದು, ಇನ್ನೊಂದು ಸಭ್ ಸಂಪ್ರದಾಯ ಇದೆ. ಹಿಂದಿನ ಕಡತಗಳನ್ನು ತೆಗೆದು ನೋಡಿ, ಅನೇಕ ಚರ್ಚೆಗಳು ಆಗಿವೆ, ಅದು ನಿಮ್ಮ ವಿವೇಚನೆಗೆ ಬಿಟ್ಟಿದ್ದು.

ಅಧ್ಯಕ್ಷರು : ಇರಲಿ ಅದು ನಮ್ಮ ವಿವೇಚನೆಗೆ ಬಿಟ್ಟಿದ್ದು.

ಅಧ್ಯಕ್ಷರು : ಈಗ ಸದನವನ್ನು ದಿನಾಂಕ 27.1.05ರ ಗುರುವಾರ ಬೆಳಿಗ್ಗೆ 11.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2.00 ಗಂಟೆಗೆ ಮುಂದೂಡಲ್ಪಟ್ಟು ಪುನಃ ದಿ: 27.1.05 ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ 1

199 (424) : ಶ್ರೀ ಅಕ್ಕಿ ಮಲ್ಲಿಕಾರ್ಜುನ್ ಸಹದೇವಪ್ಪ (ಕುಂದಗೋಳ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಪೊಲೀಸ್ ಠಾಣೆಗಳಿವೆ? ಜಿಲ್ಲೆಯಲ್ಲಿರುವ ಪೊಲೀಸ್ ಕಾನ್ಸ್‌ಟೇಬಲ್ ಸಂಖ್ಯೆ ಎಷ್ಟು?

ಆ) ಕಾನ್ಸ್‌ಟೇಬಲ್ ಕೊರತೆ ಎಷ್ಟು?

ಇ) ಕೊರತೆಯನ್ನು ತುಂಬಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಈ) ಧಾರವಾಡ ಜಿಲ್ಲೆಯಲ್ಲಿ 2001 ರಿಂದ 2004 ರವರೆಗೆ ಒಟ್ಟು ಎಷ್ಟು ದೌರ್ಜನ್ಯ ಪ್ರಕರಣಗಳು ನೊಂದಾಯಿಸಿವೆ?

ಉ) ಕುಂದುಗೋಳ ತಾಲ್ಲೂಕಿನಲ್ಲಿ 2001–04 ರಲ್ಲಿ ಒಟ್ಟು ಎಷ್ಟು ದೌರ್ಜನ್ಯ ಪ್ರಕರಣಗಳು ನೊಂದಾಯಿಸಿವೆ ಹಾಗೂ ಅವುಗಳಲ್ಲಿ ಸಜಾ ಆದ ಪ್ರಕರಣಗಳೆಷ್ಟು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಧಾರವಾಡ ಜಿಲ್ಲೆಯಲ್ಲಿ ಒಟ್ಟು 8 ಪೊಲೀಸ್ ಠಾಣೆಗಳಿರುತ್ತವೆ.

ಜಿಲ್ಲೆಯಲ್ಲಿ ಒಟ್ಟು ಪೊಲೀಸ್

ಕಾನ್ಸ್‌ಟೇಬಲ್‌ಗಳ ಸಂಖ್ಯೆ: 232

ಆ) ಮಂಜೂರಾತಿ ಬಲಕ್ಕಿಂತ 44 ಸಿಬ್ಬಂದಿ ಕೊರತೆ ಇರುತ್ತದೆ.

ಇ) ನೇಮಕಾತಿ ಪ್ರಕ್ರಿಯೆಯಲ್ಲಿ ಭರ್ತಿ ಮಾಡಲು ಪರಿಶೀಲಿಸಲಾಗುತ್ತಿದೆ.

ಈ) ಧಾರವಾಡ ಜಿಲ್ಲೆಯಲ್ಲಿ 2001 ರಿಂದ 2004 ರವರೆಗೆ ಒಟ್ಟು 91 ದೌರ್ಜನ್ಯ ಪ್ರಕರಣಗಳ ನೊಂದಾಯಿಸಿದೆ.

ಉ) ಕುಂದುಗೋಳ ತಾಲ್ಲೂಕಿನಲ್ಲಿ 2001–2004 ರವರಿಗೆ ಒಟ್ಟು 23 ಪ್ರಕರಣಗಳು ನೊಂದಾಯಿಸಿದೆ.

ಇವುಗಳಲ್ಲಿ ಸಜಾ ಆದ ಪ್ರಕರಣಗಳು ಇರುವುದಿಲ್ಲ.

200 (425) : ಶ್ರೀ ಅಕ್ಕಿ ಮಲ್ಲಿಕಾರ್ಜುನ್ ಸಹದೇವಪ್ಪ (ಕುಂದಗೋಳ) ಮಾನ್ಯ ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ನಡೆಸುತ್ತಿರುವ ಲಾಟರಿಗಳು ಯಾವ ಯಾವುವು?

ಆ) 2001 ರಿಂದ 2004 ಸಾಲಿನ ವರೆಗೆ ಬಂದ ವರಮಾನವೆಷ್ಟು?

ಇ) ಕರ್ನಾಟಕದಲ್ಲಿ ಬೇರೆ ರಾಜ್ಯದ ಲಾಟರಿಗಳನ್ನು ಮಾರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದಕ್ಕೆ ಸರ್ಕಾರ ಪರವಾನಿಗೆ ನೀಡಿದೆಯೇ?

ಈ) ಈ ಲಾಟಿಗಳನ್ನು ನಿಲ್ಲಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ರಾಜ್ಯ ಸರ್ಕಾರವು ನಡೆಸುತ್ತಿರುವ ಲಾಟರಿ ವಿಷಯಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) 2001 ರಿಂದ 2004ರ ಸಾಲಿನವರೆಗೆ ಬಂದ ವರಮಾನ ಈ ಕೆಳಕಂಡಂತಿದೆ.

2001–02	–	ರೂ. 10.46 ಕೋಟಿ
2002–03	–	ರೂ. 12.25 ಕೋಟಿ
2003–04	–	ರೂ. 50.00 ಕೋಟಿ

ಇ) ಕರ್ನಾಟಕದಲ್ಲಿ ಬೇರೆ ರಾಜ್ಯದ ಲಾಟಿಗಳನ್ನು ಮಾರುವುದು ಸರ್ಕಾರದ ಗಮನಕ್ಕೆ ಬಂದಿದೆ. ಹೊರ ರಾಜ್ಯದ ಲಾಟರಿ ಟಿಕೇಟುಗಳನ್ನು ಕರ್ನಾಟಕದಲ್ಲಿ ಮಾರಾಟ ಮಾಡಲು ಪರವಾನಗಿ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಯಾವುದೇ ರಾಜ್ಯಕ್ಕೆ ತನ್ನ ರಾಜ್ಯದ ಲಾಟರಿ ಟಿಕೇಟುಗಳನ್ನು ಮಾರಾಟಮಾಡಲು ಪರವಾನಗಿ ನೀಡಿರುವುದಿಲ್ಲ.

ಈ) ಲಾಟರಿ (ರೆಗ್ಯುಲೇಷನ್) ಆಕ್ಟ್ 98ರನ್ವಯ ಕರ್ನಾಟಕ ತನ್ನ ರಾಜ್ಯದ ಲಾಟರಿ ನಡೆಸುತ್ತಾ ಹೊರ ರಾಜ್ಯದ ಲಾಟರಿ ಮಾರಾಟವನ್ನು ನಿಷೇಧಿಸಲು ಅವಕಾಶವಿರುವುದಿಲ್ಲ. ಆದರೆ ಲಾಟರಿ (ರೆಗ್ಯುಲೇಷನ್) ಆಕ್ಟ್ 98ಕ್ಕೆ ವಿರುದ್ಧವಾಗಿ ಯಾವುದೇ ರಾಜ್ಯ ತನ್ನ ಲಾಟರಿ ಟಿಕೇಟ್ ಮಾರಾಟ ಮಾಡಿದಲ್ಲಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬಹುದಾಗಿದೆ. ಹೊರರಾಜ್ಯದ ಲಾಟರಿಯನ್ನು ನಿಷೇಧಿಸಬೇಕಾದಲ್ಲಿ ಕರ್ನಾಟಕವನ್ನು ಲಾಟರಿ ಮುಕ್ತವಲಯವನ್ನಾಗಿ ಘೋಷಿಸಬೇಕಾಗುತ್ತದೆ.